**ಮಾಗಡಿ ಪ್ರದೇಶವನ್ನು ಮೆಗಾಸಿಟಿ ಯೋಜನೆಯಡಿ ಸೇರಿಸುವ ಬಗ್ಗೆ**

2048 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ವಕ್ಫ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ, ರಾಮನಗರ,ಚೆನ್ನಪಟ್ಟಣ, ಮುಂತಾದ ತಾಲ್ಲೂಕುಗಳನ್ನು ಮೆಗಾಸಿಟಿ ಯೋಜನೆಯಡಿ ಸೇರಿಸಲಾಗಿದ್ದು ಮಾಗಡಿ ತಾಲ್ಲೂಕನ್ನು ಸೇರಿಸದೇ ಇರಲು ಕಾರಣವೇನು?*

ಆ) *ಮೆಗಾಸಿಟಿ ಯೋಜನೆಯಡಿ ಸೇರಿಸಲು ಇರಬೇಕಾದ ನೀತಿ ನಿಯಮಗಳೇನು?*

ಇ) *ಮಾಗಡಿ ಪ್ರದೇಶವನ್ನು ಸದರಿ ಯೋಜನೆಯಡಿ ತರುವ ಉದ್ದೇಶಗಳೇನಾದರೂ ಸರ್ಕಾರದ ಮುಂದಿದೆಯೇ?*

ಶ್ರೀ ಆರ್. ರೋಷನ್ ಬೇಗ್ ( ಬೆಂಗಳೂರು ಅಭಿವೃದ್ಧಿ ಮತ್ತು ವಕ್ಫ ಸಚಿವರು) :

ಅ) ಈ ಯೋಜನೆಯು ಬೆಂಗಳೂರು ನಗರಕ್ಕೆ ಮಾತ್ರ ಸೀಮಿತಗೊಂಡಿರುವುದರಿಂದ ನೆಲಮಂಗಲ, ರಾಮನಗರ, ಚನ್ನಪಟ್ಟಣಕ್ಕೆ ಇತ್ಯಾದಿಗಳನ್ನು ಮೆಗಾಸಿಟಿ ಯೋಜನೆಯಡಿ ಸೇರಿಸಲಾಗಿಲ್ಲ.

ಆ) ಭಾರತ ಸರ್ಕಾರವು 5 ನಗರಗಳಲ್ಲಿ ಪೌರ ಸೌಲಭ್ಯಗಳ ಅಭಿವೃದ್ಧಿಗೊಸ್ಕರ ಕೇಂದ್ರ ಪ್ರಾಯೋಜಿತ ಯೋಜನೆಯ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಂಡಿದ್ದು ಇದರಲ್ಲಿ ಬೆಂಗಳೂರನ್ನು ಭಾರತ ಸರ್ಕಾರ ಸೇರಿಸಿದೆ.

ಇ) ಮೇಲಿನ ಕಾರಣಗಳಿಂದ ಇದು ಉದ್ಭವಿಸುವುದಿಲ್ಲ.

**ಮಾಗಡಿ ತಾಲ್ಲೂಕಿನಲ್ಲಿ ಕೈಗಾರಿಕೆಗಳ ಸ್ಥಾಪನೆ.**

2049 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಕೈಗಾರಿಕೆಗಳಿಂದ ಜಲಮಾಲಿನ್ಯತೆ ಹಾಗೂ ವಾಯು ಮಾಲಿನ್ಯತೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ರೀತಿ ನಗರದಲ್ಲಿ ಮಾನ್ಯತೆ ಯುಂಟಾಗುತ್ತಿರುವುದರಿಂದ ಕೈಗಾರಿಕೆಗಳನ್ನು ಬೆಂಗಳೂರಿನ ಹೊರವಲಯದಲ್ಲಿ ಸ್ಥಾಪಿಸುವುದು ಸೂಕ್ತವಲ್ಲವೇ?*

ಇ) *ಹಾಗಾದರೆ ಸರ್ವ ರೀತಿಯಲ್ಲೂ ಹಿಂದುಳಿದಿರುವ ಮಾಗಡಿ ತಾಲ್ಲೂಕಿನಲ್ಲಿ ಕೈಗಾರಿಕೆಗೆ ಬೇಕಾಗಿರುವ ಎಲ್ಲಾ ಅಂಶಗಳೂ ಹಿತಕರವಾಗಿರುವುದರಿಂದ ಕೈಗಾರಿಕೆಯನ್ನು ಸ್ಥಾಪಿಸಲು ಸರ್ಕಾರದವರು ಕ್ರಮಕೈಗೊಳ್ಳುವರೇ?*

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಬೆಂಗಳೂರು ದಕ್ಷಿಣ ಮತ್ತು ಉತ್ತರ ತಾಲ್ಲೂಕು ಹಾಗೂ ಬೆಂಗಳೂರು ಅರ್ಬನ್ ಅಗ್ಲಾಮರೇಷನ್ ಪ್ರದೇಶ (1991ರ ಜನಗಣತಿಯಲ್ಲಿದ್ದಂತೆ) ವನ್ನು ಕರ್ನಾಟಕ ಸರ್ಕಾರದ 1993 ಕೈಗಾರಿಕಾ ನೀತಿಯಂತೆ ಅಭಿವೃದ್ಧಿ ಹೊಂದಿದ ಪ್ರದೇಶವೆಂದು ಸಾರಲಾಗಿದ್ದು, ಈ ಪ್ರದೇಶದಲ್ಲಿ ವಿಶೇಷವಾದ ಪರಿಸರ ಮಾಲಿನ್ಯ ರಹಿತ ಹಾಗೂ ಉನ್ನತ ತಂತ್ರಜ್ಞಾನ ಆಧಾರಿತ ಕೈಗಾರಿಕೆಗಳನ್ನು ಮಾತ್ರ ಪ್ರೋತ್ಸಾಹಿಸಲಾಗುವುದು.

ಆ) ಉದ್ದಿಮೆದಾರರು ಮಾಗಡಿ ತಾಲ್ಲೂಕಿನಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬಂದಲ್ಲಿ ಸರ್ಕಾರದ 1998ರ ಕೈಗಾರಿಕಾ ನೀತಿಯಂತೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯ ಪ್ರೋತ್ಸಾಹಕ ಮತ್ತು ರಿಯಾಯಿತಿಗಳನ್ನು ನೀಡಲಾಗುವುದು.

**ದೇವನಹಳ್ಳಿ ಬಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆ**

2050 - ಶ್ರೀ ಜಿ. ಚಂದ್ರಣ್ಣ (ದೇವನಹಳ್ಳಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ದೇವನಹಳ್ಳಿ ಬಳಿ ನಿರ್ಮಾಣ ಕಾರ್ಯವನ್ನು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಸಂಬಂಧಪಟ್ಟಂತೆ ಇಲ್ಲಿಯವರೆವಿಗೂ ಆಗಿರತಕ್ಕ ಸರ್ಕಾರದ ಕಾರ್ಯಕ್ರಮಗಳೇನು?*

*ಆ) ಯಾವ ಸಂಸ್ಥೆ ಇವರ ನಿರ್ಮಾಣ ಕಾರ್ಯವನ್ನು ತೆಗೆದುಕೊಂಡಿದೆ, ಇದಕ್ಕಾಗಿ ಅವಶ್ಯಕತೆ ಇರುವ ಜಮೀನೆಷ್ಟು, ಇದಕ್ಕೆ ಕಾರಣಗಳೇನು?*

*ಇ) ನಿರ್ಮಾಣಕ್ಕೆ ಸರ್ಕಾರಿ ಜಮೀನು ಹಾಗೂ ರೈತರ ಜಮೀನು ಎಷ್ಟು ಎಕರೆ ಬೇಕಾಗುತ್ತದೆ?*

*ಈ) ರೈತರ ಜಮೀನು ಸ್ವಾಧೀನಪಡಿಸಿಕೊಂಡಲ್ಲಿ ಒಂದು ಎಕರೆಗೆ ಎಷ್ಟು ಹಣ ಕೊಡಲಾಗುತ್ತದೆ (ಇದರ ಪೂರ್ಣ ವಿವರ ಒದಗಿಸುವುದು)*

*ಉ) ಈ ಗ್ರಾಮಗಳ ಜನತೆಗೆ ಯಾವ ರೀತಿ ಪುನರ್ ವ್ಯವಸ್ಥೆ ಮಾಡಲಾಗುತ್ತಿದೆ. ಇದರ ಪೂರ್ಣ ವಿವರ ನೀಡುವುದು.*

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಸರ್ಕಾರದ ವತಿಯಿಂದ ಅಂತರ ರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣಕ್ಕಾಗಿ ದೇವನಹಳ್ಳಿ ತಾಲ್ಲೂಕು ಮತ್ತು ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಒಟ್ಟು 5062 ಎಕರೆ 24 ಗುಂಟೆ ಜಮೀನು ಭೂಸ್ವಾಧೀನಪಡಿಸಿಕೊಳ್ಳುವ ಕಾರ್ಯ ನಡೆಯುತ್ತಿದೆ.

ಆ) ಈ ವಿಮಾನ ನಿಲ್ದಾಣದ ಕಾರ್ಯವನ್ನು ಬಿಲ್ಡ-ಓನ್-ಆಪರೇಟ್ ಆಧಾರದಲ್ಲಿ ಅನುಷ್ಠಾನಗೊಳಿಸಲು ಸರ್ಕಾರವು ಟಾಟಾ ಕೈಗಾರಿಕೆ ಮತ್ತು ಅವರ ಗುಂಪಿಗೆ ವಹಿಸಿದೆ. ಇದಕ್ಕಾಗಿ